# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.234-2016                    ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಜಯಮ್ಮ<br>ದಡದಹಳ್ಳಿ ಗ್ರಾಮ, ಮೈಸೂರು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 07-03-2025. |

**ಮುಂದುವರೆದ ಪಾಟೀ ಸವಾಲುಃ 1,2 ಮತ್ತು 4 ಪ್ರತಿವಾದಿ ಪರ ಶ್ರೀ ಹೆಚ್.ಪಿ.ಎಸ್ ವಕೀಲರಿಂದಃ**

10. ನನಗೆ ನ್ಯಾಯಾಲಯದಲ್ಲಿ ಇರುವ ವ್ಯಕ್ತಿ ಗೊತ್ತಿಲ್ಲ. ನನ್ನ ತಂದೆಯ ಚಿಕ್ಕಪ್ಪನ ಮಗಳು ಲಿಂಗಮ್ಮ ಮಂಡಕಳ್ಳಿಗೆ ಮದುವೆ ಆಗಿರುತ್ತಾರೆ ಎಂದರೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಇರುವ ವ್ಯಕ್ತಿ ಹೆಚ್.ಎನ್.ನಂಜುಂಡಯ್ಯ ರವರಿಂದ ಸ್ವತ್ತನ್ನು ಕ್ರಯಕ್ಕೆ ಪಡೆದಿರುವುದರಿಂದ ಅವರನ್ನು ಈ ದಾವೆಯ 4 ನೇ ಪ್ರತಿವಾದಿಯನ್ನಾಗಿ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಹೆಸರು ಲೋಕೇಶ್ ಎಂದರೆ ನನಗೆ ಗೊತ್ತಿಲ್ಲ. ನಾನು ಅವರನ್ನು ಈ ದಾವೆಯ 4 ನೇ ಪ್ರತಿವಾದಿಯನ್ನಾಗಿ ಮಾಡಿರುತ್ತೇನೆ ಎಂದರೆ ಸರಿ. ನಮ್ಮ ಅಪ್ಪನ ಆಸ್ತಿ ನನಗೆ ಸಿಗಬೇಕು ಎಂದು 4 ನೇ ಪ್ರತಿವಾದಿಯವರನ್ನು ಈ ದಾವೆಯ ಪಕ್ಷಕಾರರನ್ನಾಗಿ ಮಾಡಿರುತ್ತೇನೆ. ಹೆಚ್.ಎನ್.ನಂಜುಂಡಯ್ಯ ನನಗೆ ಗೊತ್ತು. ಹೆಚ್.ಎನ್.ನಂಜುಂಡಯ್ಯ ನವರಿಂದ

4 ನೇ ಪ್ರತಿವಾದಿಯವರು ಸರ್ವೇ ನಂ.92/2 ಮತ್ತು 92/3 ಅನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಸರ್ವೇ ನಂ.92/2 ಮತ್ತು 92/3 ಒಟ್ಟು ವಿಸ್ತೀರ್ಣ 0.27 ಗುಂಟೆ ಸ್ವತ್ತು 4 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ.92/2 ಮತ್ತು 92/3 ರಲ್ಲಿ ನನ್ನ ತಾಯಿ ಬದುಕಿದ್ದಾಗ ನಾವು ಉಳುಮೆ ಮಾಡುತ್ತಿದ್ದು, ಈಗ ಉಳುವೆ ಮಾಡುತ್ತಿರುವುದಿಲ್ಲ. ನನ್ನ ತಾಯಿಯವರು ಮರಣ ಹೊಂದಿ ಸುಮಾರು 20-25 ವರ್ಷಗಳಾಗಿರುತ್ತವೆ. ನನ್ನ ತಾಯಿ ಸತ್ತ ನಂತರ ನಾನು ಜಮೀನಿನ ಬಳಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯವರು ಉಳುವೆ ಮಾಡಿ ನನಗೆ ಫಸಲವನ್ನು ಕೊಡುತ್ತಿದ್ದರು ಎಂದು ನುಡಿಯುತ್ತಾರೆ.

11. ನಾನು ದಡದಹಳ್ಳಿಗೆ ಮದುವೆ ಆಗಿದ್ದು, ನನ್ನ ಅಕ್ಕನಾದ 1 ನೇ ಪ್ರತಿವಾದಿಯವರು ಹಳ್ಳಿದಿಡ್ಡಿಯಲ್ಲಿ ಇದ್ದು ವ್ಯವಸಾಯವನ್ನು ಮಾಡುತ್ತಿದ್ದರು ಎಂದರೆ ಸರಿ. ಅದೇ ರೀತಿ ಮನೆಯ ವ್ಯವಹಾರವನ್ನು ಸಹ 1 ನೇ ಪ್ರತಿವಾದಿಯಾಗಿ ಮಹದೇವಮ್ಮ ರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸಹ ನೋಡಿಕೊಳ್ಳುತ್ತಿದ್ದೆನು ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಮನೆಯ ವ್ಯವಹಾರವನ್ನು ನಾನು ಸಹ ನೋಡಿಕೊಳ್ಳುತ್ತಿರಲಿಲ್ಲ, 1 ನೇ ಪ್ರತಿವಾದಿಯಾದ ಮಹದೇವಮ್ಮ ರವರೇ ನೋಡಿಕೊಳ್ಳುತ್ತಿದ್ದರು ಎಂದರೆ

ಸರಿಯಲ್ಲ. 1 ನೇ ಪ್ರತಿವಾದಿ ನಮ್ಮ ಕುಟುಂಬದ ದರ್ದಿಗಾಗಿ ಸರ್ವೇ ನಂ.92/2 ಮತ್ತು 92/3 ರ ಸ್ವತ್ತನ್ನು 3 ನೇ ಪ್ರತಿವಾದಿಯಾದ ನಂಜುಂಡಯ್ಯನವರಿಗೆ ಮಾರರಟ ಮಾಡಿದ್ದರು ಎಂದರೆ ಸಾಕ್ಷಿ ಮಾರಾಟ ಮಾಡಿರುವುದು ನಿಜ, ಆದರೆ ನಮ್ಮ ಕುಟುಂಬದ ದರ್ದಿಗಾಗಿ ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಂಜುಂಡಯ್ಯನವರಿಗೆ ಸ್ವತ್ತನ್ನು ಮಾರಾಟ ಮಾಡಿರುವ ವಿಚಾರ ನನಗೆ ಈಗ್ಗೆ 7 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. 3 ನೇ ಪ್ರತಿವಾದಿ ನಂಜುಂಡಯ್ಯ ನವರು ಸರ್ವೇ ನಂ.92/2 ಮತ್ತು 92/3 ರ ಸ್ವತ್ತನ್ನು 4 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ನಮ್ಮ ಕುಟುಂಬದ ದರ್ದಿಗಾಗಿ ಸರ್ವೇ ನಂ.92/2 ಮತ್ತು 92/3 ರ ಸ್ವತ್ತನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, 3 ನೇ ಪ್ರತಿವಾದಿಯೂ ಅವರ ಕುಟುಂಬದ ದರ್ದಿಗಾಗಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ, 3 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ಸರ್ವೇ ನಂ.92/2 ಮತ್ತು 92/3 ರ ಸ್ವತ್ತನ್ನು ಮಾರಾಟ ಮಾಡಿರುವ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ 4 ನೇ ಪ್ರತಿವಾದಿ ಸರ್ವೇ ನಂ.92/2 ಮತ್ತು 92/3 ರ ಸ್ವತ್ತಿನಲ್ಲಿ ವ್ಯವಸಾಯ ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ

ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯವರು 3 ನೇ ಪ್ರತಿವಾದಿಯವರಿಗೆ ಬರೆದುಕೊಟ್ಟಿರುವ ಕ್ರಯಪತ್ರವು ನನ್ನನ್ನು ಸಹ ಬದ್ಧಪಡಿಸುತ್ತದೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಈಗ ಆಸ್ತಿಗಳ ಬೆಲೆ ಹೆಚ್ಚಳವಾಗಿರುವುದರಿಂದ 4 ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**